**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿ ಪೂರಕ ಕಟ್ಟಡಗಳು**
**ನೃಪತುಂಗ ರಸ್ತೆ, ಬೆಂಗಳೂರು – 560 001**

ಆರ್.ಎಂ.ಎಸ್.ಎ /ಬುನಾದಿ ತರಬೇತಿ/15/2011-12 ದಿನಾಂಕ 21-10-2011

ಜ್ಞಾಪನಾ

ವಿಷಯ:- ದಿನಾಂಕ 05-11-2011 ರಂದು ಉನ್ನತೀಕರಿಸಿದ ಶಾಲೆಗಳು ಹಾಗು ಆದರ್ಶ ವಿದ್ಯಾಲಯಗಳಲ್ಲಿ ಬಾಹ್ಯ ಮೂಲದಿಂದ ಆಯ್ಕೆಯಾದ ಶಿಕ್ಷಕರಿಗಾಗಿ ಮತ್ತು ಸೆಮಿಸ್ 2011-12ನ್ನು ಪೂರ್ಣಗೊಳಿಸಲು ಮುಖ್ಯ ಶಿಕ್ಷಕರಿಗೆ ತರಬೇತಿಯನ್ನು ಟೆಲಿಕಾನ್ಫರೆನ್ಸ್ ಮೂಲಕ ನಡೆಸುವ ಕುರಿತು.

**********

ಉನ್ನತೀಕರಿಸಿದ ಶಾಲೆಗಳು ಹಾಗು ಆದರ್ಶ ವಿದ್ಯಾಲಯಗಳಲ್ಲಿ ಬಾಹ್ಯ ಮೂಲದಿಂದ ಆಯ್ಕೆಯಾದ ಶಿಕ್ಷಕರಿಗಾಗಿ ಮತ್ತು 2011-12ರ ಸೆಮಿಸ್ ಮಾಹಿತಿ ಸಂಗ್ರಹಣೆ ಹಾಗು ಗಣಕೀಕರಣ ಕುರಿತಂತೆ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಮುಖ್ಯ ಶಿಕ್ಷಕರಿಗೆ ತರಬೇತಿಯನ್ನು ಟೆಲಿ ಕಾನ್ಫರೆನ್ಸ್ ಮೂಲಕ ನಡೆಸಲು ಯೋಜಿಸಲಾಗಿದೆ. ಈ ತರಬೇತಿಯನ್ನು ತಾಲ್ಲುಕು ಹಂತದಲ್ಲಿ ಬಿ.ಆರ್.ಸಿ ಕೇಂದ್ರಗಳಲ್ಲಿ , ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳಲ್ಲಿ ಹಾಗೂ ಹೆಚ್ಚಿನ ಸಂಖ್ಯೆಯ ಶಿಬಿರಾರ್ಥಿಗಳಿದ್ದಲ್ಲಿ ತಾಲ್ಲುಕು ಕೇಂದ್ರದಲ್ಲಿ ಲಭ್ಯವಿರುವ ತಾಲ್ಲುಕು ಪಂಚಾಯಿತಿ ಸ್ವೀಕೃತಿ ಕೇಂದ್ರಗಳಲ್ಲಿ ಆಯೋಜಿಸಲು ಕ್ರಮ ವಹಿಸುವುದು. ಜಿಲ್ಲಾ ಹಂತದಲ್ಲಿ ಡಯಟ್ ಪ್ರಾಂಶುಪಾಲರು ತಾಲ್ಲುಕು ಹಂತದಲ್ಲಿ ಬಿ.ಆರ್.ಸಿ ಕೋಆರ್ಡಿನೇಟರ್‌ರವರು ಸ್ವೀಕೃತಿ ಕೇಂದ್ರಗಳಲ್ಲಿ ತರಬೇತಿ ನಡೆಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲು ಸಂಬಂಧಿಸಿದ ತಾಲ್ಲುಕುಗಳಿಗೆ ಉಪನಿರ್ದೇಶಕರು (ಆಡಳಿತ)ರವರು ಸೂಚನೆ ನೀಡುವುದು. ಡಿ.ವೈ.ಪಿ.ಸಿ ಆರ್.ಎಂ.ಎಸ್.ಎ ರವರು ಡಯಟ್ ಜೊತೆಯಲ್ಲಿ ಸಮನ್ವಯ ಮಾಡಿಕೊಳ್ಳುವುದು ಹಾಗೂ ಶಿಬಿರಾರ್ಥಿಗಳ ಸಂಖ್ಯೆಗನುಗುಣವಾಗಿ ಕೇಂದ್ರಗಳನ್ನು ನಿಗದಿಪಡಿಸಿ ಶಿಕ್ಷಕರು ತರಬೇತಿಯಲ್ಲಿ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸುತ್ತೋಲೆಯನ್ನು ಉಪನಿರ್ದೇಶಕರ ನೇತೃತ್ವದಲ್ಲಿ ನೀಡುವುದು.

ಈ ತರಬೇತಿಯನ್ನು ಎರಡು ಅವಧಿಗಳಲ್ಲಿ ನಡೆಸಲಾಗುವುದು. ಮೊದಲ ಅವಧಿಯು ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 1.00 ಗಂಟೆವರೆಗೆ ಎರಡನೆ ಅವಧಿ 2.00 ಗಂಟೆಯಿಂದ 5.30 ರವರೆಗೆ ನಡೆಯುತ್ತದೆ.

ಮೊದಲ ಅವಧಿಯಲ್ಲಿ ಉನ್ನತೀಕರಿಸಿದ ಶಾಲೆಗಳ ಮತ್ತು ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು ಮತ್ತು ಆಸ್ಟ್ರಿಕ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಿಂದ ಸೇವೆ ನೀಡುತ್ತಿರುವ ಶಿಕ್ಷಕರು (**ಅನೆಕ್ಸರ್-3 ತುಂಬಿರುವ ಮತ್ತು ಖಾಲಿ ನಮೂನೆಯೊಂದಿಗೆ**) ಮತ್ತು ಹೆಣ್ಣು ಮಕ್ಕಳ ವಿದ್ಯಾರ್ಥಿನಿಲಯಗಳ ವಾರ್ಡನ್/ ಮೇಲ್ವಿಚಾರಕರು ಭಾಗವಹಿಸುವುದು.

ಎರಡನೇ ಅವಧಿಯಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳ ಪದವಿ ಪೂರ್ವ ಶಿಕ್ಷಣ ಸಂಸ್ಥೆಯ ಮತ್ತು ಮುಖ್ಯೋಪಾಧ್ಯಾಯರುಗಳು ಮತ್ತು ಪ್ರಾಂಶುಪಾಲರು ಶಾಲೆಯಲ್ಲಿ ಲಭ್ಯವಿರುವ ಸೆಮಿಸ್ ನಮೂನೆಯೊಂದಿಗೆ ಭಾಗವಹಿಸುವುದು.

ಈ ಎರಡು ಅವಧಿಗಳಲ್ಲೂ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಆಡಳಿತ), ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, ಡಿ.ವೈ.ಪಿ.ಸಿ ಮತ್ತು ಎ.ಪಿ.ಸಿ, ಆರ್.ಎಂ.ಎಸ್.ಎ ರವರು ಮತ್ತು ಡಯಟ್‌ನಿಂದ ಪ್ರಾಂಶುಪಾಲರು ಮತ್ತು ಹಿರಿಯ ಉಪನ್ಯಾಸಕರು ಭಾಗವಹಿಸುವುದು.

ತಾಲ್ಲುಕು ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮೇಲೆ ತಿಳಿಸಿದಂತೆ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರ ಜೊತೆಯಲ್ಲಿ ಬಿ.ಆರ್.ಸಿಯಿಂದ ಒಬ್ಬರು ಬಿ.ಆರ್.ಸಿ ಕೋಆರ್ಡಿನೇಟರ್/ಬಿ.ಆರ್.ಪಿ ಸುಗಮಕಾರರಾಗಿ ಭಾಗವಹಿಸುವುದು. ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ

ನಿರ್ದೇಶಕರು(ಆರ್.ಎಂ.ಎಸ್.ಎ)

**ದಿನಾಂಕ 05-11-2011 ರಂದು ನಡೆಯುವ ತರಬೇತಿ ವೇಳಾ ಪಟ್ಟಿ**

**ಮೊದಲ ಅವಧಿ:**

**ಭಾಗವಹಿಸುವವರು:-** ಉನ್ನತೀಕರಿಸಿದ ಶಾಲೆಗಳ ಮತ್ತು ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು ಮತ್ತು ಬಾಹ್ಯ ಮೂಲದಿಂದ ಸೇವೆ ನೀಡುತ್ತಿರುವ ಶಿಕ್ಷಕರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು

| ಕ್ರ ಸಂ | ಇಂದ | ವರೆಗೆ | ವಿಷಯ | ನಿರ್ವಹಣೆ |
|---|---|---|---|---|
| 1. | ಬೆಳಿಗ್ಗೆ 9.00 | 9.30 | ನೋಂದಣಿ | ಸ್ವೀಕೃತಿ ಕೇಂದ್ರಗಳಲ್ಲಿ ಸುಗಮಕಾರರು |
| 2. | 9.30 | 9.45 | ಪ್ರಾಸ್ಥಾವಿಕ ನುಡಿಗಳು | ರಾಜ್ಯ ಯೋಜನಾ ನಿರ್ದೇಶಕರು |
| 3. | 9.45 | 10.20 | • ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಉದ್ದೇಶಗಳು<br>• ಆದರ್ಶ ವಿದ್ಯಾಲಯದ ಉದ್ದೇಶಗಳು<br>• ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯದ ಉದ್ದೇಶಗಳು | ನಿರ್ದೇಶಕರು (ಆರ್.ಎಂ.ಎಸ್.ಎ) |
| 4. | 10.20 | 10.40 | ಲೆಕ್ಕ ಪತ್ರ ನಿರ್ವಹಣೆ<br>• ಉನ್ನತೀಕರಿಸಿದ ಶಾಲೆಗಳಲ್ಲಿ – ಶಾಲಾ ಅನುದಾನ<br>• ಆದರ್ಶ ವಿದ್ಯಾಲಯ ಮತ್ತು ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯಗಳಲ್ಲಿ ವೆಚ್ಚಗಳ ನಿರ್ವಹಣೆ ಬಗ್ಗೆ<br>• ನಗದು ಪುಸ್ತಕ ನಿರ್ವಹಣೆ | ಜಂಟಿ ನಿರ್ದೇಶಕರು (ಆರ್.ಎಂ.ಎಸ್.ಎ) ಮತ್ತು ಲೆಕ್ಕಾಧೀಕ್ಷಕರು |
| 5. | 10.40 | 11.00 | ಪ್ರಶ್ನೋತ್ತರ ಅವಧಿ | ಮುಖ್ಯ ಶಿಕ್ಷಕರು / ವಾರ್ಡನ್‌ಗಳು ಮಾತ್ರ ಪ್ರಶ್ನೆಗಳನ್ನು ಕೇಳಲು ಅವಕಾಶವಿರುತ್ತದೆ. |
| 6. | 11.00 | 11.15 | ಟೀ/ಕಾಫಿ ವಿರಾಮ | |
| 7. | 11.15 | 11.40 | ಬಾಹ್ಯ ಮೂಲದಿಂದ ಆಯ್ಕೆಯಾಗಿರುವ ಶಿಕ್ಷಕರ ಬಗ್ಗೆ ಮುಖ್ಯ ಶಿಕ್ಷಕರು ತೆಗೆದುಕೊಳ್ಳಬೇಕಾದ ಕ್ರಮಗಳು<br>• ಶಿಕ್ಷಕರ ವಿದ್ಯಾರ್ಹತೆ<br>• ಅನೆಕ್ಷರ್-3ರ ನಿರ್ವಹಣೆ<br>• ಬೋಧನಾ ಮಾಧ್ಯಮ<br>• ವೇಳಾಪಟ್ಟಿ<br>• ಪರಿಹಾರ ಬೋಧನೆ<br>• ಪರೀಕ್ಷೆಗಳು<br>• ವಿಧಿಸಲಾಗುವ ದಂಡಗಳು | ನಿರ್ದೇಶಕರು/ಹಿರಿಯ ಕಾರ್ಯಕ್ರಮಾಧಿಕಾರಿಗಳು |
| 8. | 11.40 | 12.00 | ಪ್ರಶ್ನೋತ್ತರ ಅವಧಿ | |
| 9. | 12.00 | 12.30 | • ಉನ್ನತೀಕರಿಸಿದ ಮತ್ತು ಆದರ್ಶ ವಿದ್ಯಾಲಯ ಶಾಲೆಗಳ ಶಿಕ್ಷಕರು ನಿರ್ವಹಿಸಬೇಕಾದ ಜವಾಬ್ದಾರಿಗಳು<br>• ಘಟಕ ಪರೀಕ್ಷೆ ಮತ್ತು ಪ್ರಸ್ತುತಿ<br>• ಪರಿಹಾರ ಬೋಧನೆ<br>• ವೈಯಕ್ತಿಕ ಅಂಕ ಪಟ್ಟಿ<br>• ಕ್ರೋಢಿಕೃತ ಅಂಕ ಪಟ್ಟಿ<br>• ವಿದ್ಯಾರ್ಥಿಗಳ ಪ್ರೊಫೈಲ್<br>• ಬೋಧನಾ ಕೇಂದ್ರಗಳು<br>• ಅರೆಕಾಲಿಕ ಶಿಕ್ಷಕರು | ನಿರ್ದೇಶಕರು/ ಜಂಟಿ ನಿರ್ದೇಶಕರು. |
| 10. | 12.30 | 12.45 | ಪ್ರಶ್ನೋತ್ತರ ಅವಧಿ | |
| 11. | 12.45 | 1.00 | ಶಿಕ್ಷಕರಿಗೆ ದೊರಕುವ ಸೌಲಭ್ಯಗಳ ಕುರಿತಂತೆ ಶಿಕ್ಷಕರು ನಿರ್ವಹಿಸಬೇಕಾದ ಕಾರ್ಯಗಳು ಮತ್ತು ಮುಕ್ತಾಯದ | |

**ಎರಡನೇ ಅವಧಿ:**

**ಭಾಗವಹಿಸುವವರು:-** ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳ ಪದವಿ ಪೂರ್ವ ಶಿಕ್ಷಣ ಸಂಸ್ಥೆಯ ಮತ್ತು ಮುಖ್ಯೋಪಾಧ್ಯಾಯರುಗಳು ಮತ್ತು ಪ್ರಾಂಶುಪಾಲರು ಭಾಗವಹಿಸುವುದು.

| ಕ್ರ ಸಂ | ಇಂದ | ವರೆಗೆ | ವಿಷಯ | ನಿರ್ವಹಣೆ |
|---|---|---|---|---|
| | | | | ಸ್ವೀಕೃತಿ ಕೇಂದ್ರಗಳಲ್ಲಿ ಸುಗಮಕಾರರು |
| 1. | 1.45 | 2.15 | ನೋಂದಣಿ | ರಾಜ್ಯ ಯೋಜನಾ ನಿರ್ದೇಶಕರು |
| 2. | 2.15 | 2.30 | ಪ್ರಾಸ್ತಾವಿಕ ನುಡಿಗಳು | ನಿರ್ದೇಶಕರು (ಆರ.ಎಂ.ಎಸ್.ಎ) |
| 3. | 2.30 | 2.45 | ಸೆಮಿಸ್ ಮಾಹಿತಿ ಸಂಗ್ರಹಣೆ ಉದ್ದೇಶ | |
| 4. | 2.45 | 3.00 | ಮಾಹಿತಿಯನ್ನು ಸಿದ್ಧಪಡಿಸುವ ಅವಧಿ ಮತ್ತು ಸಂಗ್ರಹಣೆ ಬಗ್ಗೆ | ಜಂಟಿ ನಿರ್ದೇಶಕರು (ಆರ.ಎಂ.ಎಸ್.ಎ) ಮತ್ತು ಲೆಕ್ಕಾಧೀಕ್ಷಕರು |
| | | | | ಕಿರಿಯ ಕಾರ್ಯಕ್ರಮಾಧಿಕಾರಿಗಳು |
| 5. | 3.00 | 3.45 | ನಮೂನೆಗಳ ಬಗ್ಗೆ ಪರಿಚಯ | |
| 6. | 3.45 | 4.00 | ಟೀ/ ಕಾಫಿ ವಿರಾಮ | ನಿರ್ದೇಶಕರು (ಆರ್.ಎಂ.ಎಸ್.ಎ) |
| 7. | 4.00 | 4.20 | ಸಂಗ್ರಹಿಸಿರುವ ಮಾಹಿತಿಗಳ ವಿವಿಧ ಹಂತಗಳಲ್ಲಿ ಪರಿಶೀಲನೆ | |
| 8. | 4.20 | 4.35 | ಪ್ರಶ್ನೋತ್ತರ ಅವಧಿ | ಕಿರಿಯ ಕಾರ್ಯಕ್ರಮಾಧಿಕಾರಿಗಳು |
| 9. | 4.35 | 5.00 | ಸೆಮಿಸ್ ನಮೂನೆಗಳ ಗಣಕೀರಣ | |

ನಿರ್ದೇಶಕರು (ಆರ್.ಎಂ.ಎಸ್.ಎ)

ಪ್ರತಿಯನ್ನು

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿ ಹಾಗೂ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿ ಹಾಗೂ ಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಡಿ.ವೈ.ಪಿ.ಸಿ ಮತ್ತು ಎ.ಪಿ.ಸಿ ರವರಿಗೆ ಸೂಕ್ತ ಕ್ರಮಕ್ಕಾಗಿ ಹಾಗೂ ತರಬೇತಿಗೆ ಹಾಜರಾಗಲು
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇ ರವರಿಗೆ ಸೂಕ್ತ ಕ್ರಮಕ್ಕಾಗಿ ಹಾಗೂ ತರಬೇತಿಗೆ ಹಾಜರಾಗಲು
5. ರಾಜ್ಯದ ಎಲ್ಲಾ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು ರವರಿಗೆ ತರಬೇತಿ ಸುಗಮವಾಗಿ ನಡೆಯಲು ಸ್ವೀಕೃತಿ ಕೇಂದ್ರಗಳನ್ನು ಸಿದ್ಧಪಡಿಸಿಕೊಳ್ಳಲು ಮತ್ತು ಬಿ.ಆರ್.ಪಿ ರವರನ್ನು ಸುಗಮಕಾರರಾಗಿ ಕಾರ್ಯ ನಿರ್ವಹಿಸುವಂತೆ ಕ್ರಮ ಕೈಗೊಳ್ಳಲು.
6. ರಾಜ್ಯ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ಮುಖ್ಯೋಪಾಧ್ಯಾಯರು ಹಾಗೂ ಪ್ರಾಂಶುಪಾಲರು ತರಬೇತಿಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಿದೆ.
7. ರಾಜ್ಯ ಎಲ್ಲಾ ಉನ್ನತೀಕರಿಸಿದ ಮತ್ತು ಆದರ್ಶ ವಿದ್ಯಾಲಯಗಳ ಶಾಲೆಗಳ ಮುಖ್ಯೋಪಾಧ್ಯಾಯರು ಹಾಗೂ ಹೆಣ್ಣು ಮಕ್ಕಳ ವಿದ್ಯಾರ್ಥಿನಿಲಯದ ವಾರ್ಡನ್‌ವರು ತರಬೇತಿಗೆ ಕಡ್ಡಾಯವಾಗಿ **ಅನೆಕ್ಷರ್-3** ರೊಂದಿಗೆ ಹಾಜರಾಗಲು ಸೂಚಿಸಿದೆ.
8. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ ಬೆಂಗಳೂರು ವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುಂತೆ ಕೋರಿ.
9. ಕಛೇರಿ ಪ್ರತಿ.